ಶ್ರೀ ಮೊಹಮ್ಮದ್ ಮೊಯಿನುದ್ದೀನ್ (ವಸತಿ ರಾಜ್ಯ ಸಚಿವರು).—

ಅ)

ವರ್ಷ	ಮಂಜೂರಾದ ಮನೆಗಳ ಸಂಖ್ಯೆ	ಪೂರ್ಣಗೊಂಡ ಮನೆಗಳ ಸಂಖ್ಯೆ	ಅಪೂರ್ಣಗೊಂಡ ಮನೆಗಳ ಸಂಖ್ಯೆ
೧	೨	೩	೪
೧೯೮೪-೮೫	೫೫,೨೨೫	೫೧,೧೯೫	೪,೦೩೦
೧೯೮೫-೮೬	೫೦,೦೦೦	೬,೪೩೮	೪೩,೫೬೨
೧೯೮೬-೮೮	೪೦,೩೦೫	...	೪೦,೩೮೫

ಅ) ಹೌದು.

ಇ) ಹುಡ್ಕೋ ಸಂಸ್ಥೆಯಿಂದ ಬರಬೇಕಾಗಿರುವ ಸಾಲದ ಕಂತಿಂಗಳು ಬಾರದೆ ಇರುವುದರಿಂದ ಪೂರ್ಣ ಹಣವನ್ನು ಬಿಡುಗಡೆ ಮಾಡಿರುವುದಿಲ್ಲ.

ಬಸವ ಕಲ್ಯಾಣಕ್ಕೆ 'ಯಾತ್ರಿಕ' ಮಂಜೂರಾತಿ

೧೦೬೯. ಶ್ರೀ ಬಸವರಾಜ್ ಪಾಟೀಲ್ ಅಟ್ಟೂರು.—ಮಾನ್ಯ ವಾರ್ತಾ, ಪ್ರವಾಸೋದ್ಯಮ, ಸಂಸ್ಕೃತಿ ಮತ್ತು ಬೆಂಗಳೂರು ಅಭಿವೃದ್ಧಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಬಸವಕಲ್ಯಾಣ್ಣವನ್ನು ಐತಿಹಾಸಿಕ ಸ್ಥಳವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಆ) ಹಾಗಿದ್ದಲ್ಲಿ ಈ ಸ್ಥಳವನ್ನು ಅಭಿವೃದ್ಧಿ ಗೊಳಿಸಲು ಕೈಗೊಂಡಿರುವ ಕ್ರಮಗಳೇನು ?

ಇ) ಬಸವಕಲ್ಯಾಣಕ್ಕೆ "ಯಾತ್ರಿಕ" ಮಂಜೂರಾತಿ ಮಾಡಲು ಸರ್ಕಾರವು ಯೋಚಿಸಿದ್ದಾರೆಯೇ ?

ಈ) ಹಾಗಿದ್ದಲ್ಲಿ ಇದಕ್ಕೆ ಎಷ್ಟು ಹಣವನ್ನು ಮಂಜೂರು ಮಾಡಲಾಗಿದೆ/ಆಗುವುದು?

ಶ್ರೀ ಎಂ. ಪಿ. ಪ್ರಕಾಶ್ (ವಾರ್ತಾ, ಪ್ರವಾಸೋದ್ಯಮ, ಸಂಸ್ಕೃತಿ ಮತ್ತು ಬೆಂಗಳೂರು ಅಭಿವೃದ್ಧಿ ಮಂತ್ರಿಗಳು).—

ಅ) ಹೌದು.

ಆ) ಪ್ರವಾಸಿಗರಿಗಾಗಿ ಮಾಹಿತಿ ನೀಡಲು ಪ್ರವಾಸಿ ಮಾಹಿತಿ ಕೇಂದ್ರ ಈಗಾಗಲೇ ತೆರೆಯಲಾಗಿದೆ.

ಇ) ಯಾತ್ರಿಕ ನಿರ್ಮಿಸುವ ಬಗ್ಗೆ ೧೯೮೮-೮೯ನೇ ಸಾಲಿನ ಯೋಜನೆಯಲ್ಲಿ ಸೇರಿಸಿ ಅಭಿವೃದ್ಧಿ ಪಡಿಸುವಂತೆ ಕೇಂದ್ರ ಸರ್ಕಾರವನ್ನು ಕೋರಲಾಗಿದೆ.

ಈ) ಉದ್ಭವಿಸುವುದಿಲ್ಲ.

ಧಾರವಾಡ ಜಿಲ್ಲೆಯ ಪುರಸಭೆಗಳಲ್ಲಿಯ ಹಣದ ದುರುಪಯೋಗದ ಬಗ್ಗೆ.

೧೦೮೫. ಶ್ರೀ ಜ್ಞಾನದೇವ ದೊಡ್ಡಪೋಟಿ (ರೋಣ).—ಮಾನ್ಯ ನಗರಾಭಿವೃದ್ಧಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಧಾರವಾಡದಲ್ಲಿರುವ ಪುರಸಭೆಯ ಕಛೇರಿಗಳೆಷ್ಟು ?

ಆ) ಎಷ್ಟು ಪುರಸಭೆ ಕಛೇರಿಗಳಲ್ಲಿ ಹಣದ ದುರುಪಯೋಗದ ಪ್ರಕರಣಗಳು ಬೆಳಕಿಗೆ ಬಂದಿವೆ ?

ಇ) ರೋಣ ತಾಲ್ಲೂಕಿನಲ್ಲಿ ೩ ಪುರಸಭೆಗಳಲ್ಲಿ ಹಣವ ದುರುಪಯೋಗದ ಪ್ರಕರಣಗಳಂ ಸಹ ಏನಾದರೂ ಸರ್ಕಾರದ ಗಮನಕ್ಕೆ ಬಂದಿರಂವುದೇ ?

ಈ) ಹಾಗಿದ್ದಲ್ಲಿ ಸಂಬಂಧಪಟ್ಟ ಮುಖ್ಯಾಧಿಕಾರಿಗಳ ಮೇಲೆ ಏನಂ ಕ್ರಮ ಕೈಗೊಂಡಿರುವಿರಿ?

ಉ) ಕ್ರಮವನ್ನು ತೆಗೆದುಕೊಂಡ ಮೇಲೆ ಆದ ಪರಿಣಾಮವೇನು ?

ಶ್ರೀ ಎಂ. ಚಂದ್ರಶೇಖರ್ (ನಗರಾಭಿವೃದ್ಧಿ ಸಚಿವರು).—

ಅ) ಧಾರವಾಡದಲ್ಲಿ ೧೬ ಪುರಸಭೆಗಳಿವೆ.

ಆ) ಅಣ್ಣಿಗೇರಿ ಮತ್ತು ರೋಣ ಎರಡು ಪುರಸಭೆಗಳಲ್ಲಿ ಹಣದ ದುರುಪಯೋಗದ ಪ್ರಕರಣಗಳು ಬೆಳಕಿಗೆ ಬಂದಿದೆ.

ಇ) ಪುರಸಭೆ, ರೋಣ ಇದರಲ್ಲಿ ೩ ಪ್ರಕರಣಗಳಲ್ಲಿ ಒಟ್ಟು ರೂ. ೧೦,೮೪೧-೮೫ ಹಣ ದುರುಪಯೋಗವಾದದ್ದು ಗಮನಕ್ಕೆ ಬಂದಿದೆ.

ಈ) ರೋಣ ಪುರಸಭೆಯಲ್ಲಿ ೩ ಪ್ರಕರಣಗಳಲ್ಲಿ ರೂ. ೧೦,೮೪೧-೮೬ ಹಣ ದುರುಪಯೋಗವಾಗಿದ್ದು, ಧಾರವಾಡ ಜಿಲ್ಲಾಧಿಕಾರಿಗಳು ಇದರ ಬಗ್ಗೆ ಉಪ ವಿಭಾಗಾಧಿಕಾರಿಗಳು ಗದಗ ಉಪ ವಿಭಾಗ ಇವರನ್ನು ತನಿಖಾಧಿಕಾರಿಗಳೆಂದು ೧೧-೨-೧೯೮೮ ರಂದು ನೇಮಿಸಲಾಗಿದ್ದು, ಇವರಿಂದ ವರದಿ ಬಂದ ಮೇಲೆ ಸಂಬಂಧಪಟ್ಟವರಿಗೆ ಶಿಕ್ಷೆ ವಿಧಿಸಲು ಕ್ರಮ ತೆಗೆದುಕೊಳ್ಳಲಾಗುವುದು.

ಉ) ಇದೀಗ ತನಿಖೆ ನಡೆಯುತ್ತಿರುವುದರಿಂದ ತನಿಖೆಯ ನಂತರ ಕ್ರಮ ತೆಗೆದುಕೊಳ್ಳಲಾಗುವುದು.

ಇಂಚಲ ಗ್ರಾಮದಲ್ಲಿ ಕುಡಿಯುವ ನೀರಿನ ಯೋಜನೆಯನ್ನು ಪೂರ್ಣಗೊಳಿಸುವ ಬಗ್ಗೆ

೧೦೭೮. ಶ್ರೀ ಶಿವಾನಂದ ಎಚ್. ಕೌಜಲಗಿ (ಬೈಲಹೊಂಗಲ).—ಮಾನ್ಯ ಗ್ರಾಮೀಣಾಭಿವೃದ್ಧಿ, ಪಂಚಾಯಿತ್‌ರಾಜ್ ಹಾಗೂ ವಕ್ಫ್ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಬೆಳಗಾವಿ ಜಿಲ್ಲೆ ಸೌಂದತ್ತಿ ತಾಲ್ಲೂಕಿನ ಇಂಚಲ ಗ್ರಾಮಕ್ಕೆ ಎನ್‌ಆರ್‌ಡಬ್ಲ್ಯೂಎಸ್ ಯೋಜನೆಯಂ ಯಾವಾಗ ಮಂಜೂರು ಆಯಿತಂ ?

ಆ) ಈ ಯೋಜನೆಗೆ ಮಂಜೂರಾದ ಹಣವೆಷ್ಟು ಮತ್ತು ಈಗ ಆ ಕೆಲಸವು ಯಾವ ಹಂತದಲ್ಲಿದೆ ?

ಇ) ಆ ಕೆಲಸವನ್ನು ಪೂರ್ಣ ಮುಗಿಸಲು ಸರ್ಕಾರದವರು ಯಾವ ಕ್ರಮವನ್ನು ಕೈಗೊಂಡಿರುವರು ?

ಶ್ರೀ ಅಬ್ದುಲ್ ನಜೀರ್ ಸಾಬ್ (ಗ್ರಾಮೀಣಾಭಿವೃದ್ಧಿ, ಪಂಚಾಯತ್ ರಾಜ್ ಹಾಗೂ ವಕ್ಫ್ ಮಂತ್ರಿಗಳು).—

ಅ) ದಿನಾಂಕ ೧೨-೨-೧೯೮೫ ರಲ್ಲಿ ಮಂಜೂರು ಆಯಿತು.

ಆ) ಈ ಯೋಜನೆಗೆ ಮಂಜೂರಾದ ಹಣ ರೂ. ೭.೬೯ ಲಕ್ಷಗಳು. ಈ ಯೋಜನೆಯ ಜಲ ಮೂಲವಾದ ತೆರೆದ ಬಾವಿಯ ಕೆಲಸ ಪ್ರಗತಿಯಲ್ಲಿದ್ದು ಭೂ ಮಟ್ಟದ ಜಲಸಂಗ್ರಹಾಲಯದ ಕೆಲಸವು ಪ್ರಗತಿಯಲ್ಲಿದೆ. ರೈಸಿಂಗ್ ಮೈನ್ ಮತ್ತು ವಿತರಣಾ ವ್ಯವಸ್ಥೆ ಪೂರ್ಣಗೊಂಡಿದೆ.

ಇ) ಈ ಯೋಜನೆಯನ್ನು ೧೯೮೮-೮೯ ರಲ್ಲಿ ಪೂರ್ಣಗೊಳಿಸಲು ಯೋಜಿಸಿದೆ.